ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ತ್ಯಾಜ್ಯ ನಿರ್ವಹಣೆಯಲ್ಲಿ ಸಾಧನೆಗೈದ ಕುತ್ಯಾರು ಗ್ರಾಮ ಪಂಚಾಯತಿ

**ಆರೋಗ್ಯ ಮತ್ತು ನೈರ್ಮಲ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಉತ್ತಮ ಆರೋಗ್ಯಕ್ಕಾಗಿ ಮತ್ತು ಉತ್ತಮ ಜೀವನ ಮಟ್ಟಕ್ಕಾಗಿ ಸ್ವಚ್ಛ ಪರಿಸರ ಬಹಳ ಮುಖ್ಯವಾಗಿದೆ. ಸ್ವಚ್ಛ ಭಾರತ್ ಮಿಷನ್ ( ಗ್ರಾಮೀಣ) ಯೋಜನೆಯಡಿ ತ್ಯಾಜ್ಯ ನಿರ್ವಹಣಾ ಘಟಕಗಳು ತ್ಯಾಜ್ಯ ನಿರ್ವಹಣೆ ಮಾಡುವ ಮೂಲಕ ಸ್ವಚ್ಛಂದ ಪರಿಸರ ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.**

ಈ ರೀತಿ ತ್ಯಾಜ್ಯ ನಿರ್ವಹಣೆಯಲ್ಲಿ ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಕುತ್ಯಾರು ಗ್ರಾಮ ಪಂಚಾಯತಿಯೂ ಪ್ರಮುಖವಾದುದ್ದಾಗಿದೆ. ಕುತ್ಯಾರು ಗ್ರಾಮ ಪಂಚಾಯತಿಯು ಜಿಲ್ಲಾ ಹಾಗೂ ತಾಲೂಕು ಕೇಂದ್ರದಿಂದ ಸುಮಾರು 25 ಕಿ.ಮೀ ದೂರದಲ್ಲಿದೆ. ಸುಮಾರು 1447 ಎಕರೆ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ. ಈ ಗ್ರಾಮದಲ್ಲಿ 1282 ಮನೆಗಳಿದ್ದು , 5,714 ಜನರು ವಾಸಿಸುತ್ತಿದ್ದಾರೆ. ಇನ್ನು ಪಂಚಾಯತ್ ವ್ಯಾಪ್ತಿಯೂ ಒಟ್ಟು 7 ಸಾರ್ವಜನಿಕ ಸಂಸ್ಥೆ ಹಾಗೂ 70 ವಾಣಿಜ್ಯ ಸಂಸ್ಥೆಗಳನ್ನು ಒಳಗೊಂಡಿದೆ. ಗ್ರಾಮದ ಸಾಕ್ಷರತೆ ಪ್ರಮಾಣ 98% ರಷ್ಟಿದೆ.



## ಅನುಷ್ಟಾನಕ್ಕೂ ಮೊದಲ ಚಿತ್ರಣ:

ಶೈಕ್ಷಣಿಕವಾಗಿ ಮುಂದುವರೆದ ಗ್ರಾಮವಾಗಿದ್ದರೂ ಗ್ರಾಮದಲ್ಲಿ ಎಲ್ಲೆಂದರಲ್ಲಿ ಜನರು ಕಸವನ್ನು ಎಸೆಯುತ್ತಿದ್ದರು. ಗ್ರಾಮದಲ್ಲಿ ಸ್ವಚ್ಛತೆ ಎಂಬುವುದು ಸಂಪೂರ್ಣ ಮಾಯವಾಗಿ ಅನೈರ್ಮಲ್ಯತೆಯ ತಾಣವಾಗಿತ್ತು. ಅಲ್ಲದೇ ತ್ಯಾಜ್ಯ ನಿರ್ವಹಣೆಯೂ ಗ್ರಾಮ ಪಂಚಾಯತಿಗೆ ದೊಡ್ಡ ಸಮಸ್ಯೆಯಾಗಿತ್ತು. ಬಳಿಕ ಸ್ವಚ್ಛ ಭಾರತ್ ಮಿಷನ್ ( ಗ್ರಾ) ಯೋಜನೆಯಡಿ

ಸ್ವಚ್ಛತೆಯನ್ನು ಕಾಪಾಡುವ ನಿಟ್ಟಿನಲ್ಲಿ ತ್ಯಾಜ್ಯ ನಿರ್ವಹಣಾ ಘಟಕವನ್ನು ಯುವಕ ಸಂಘಗಳು ಹಾಗೂ ಪಂಚಾಯತ್ ಸಮನ್ವಯದೊಂದಿಗೆ 2021 ರಲ್ಲಿ ಪ್ರಾರಂಭಿಸಲು ಕುತ್ಯಾರು ಗ್ರಾಮ ಪಂಚಾಯತಿ ಮುಂದಾಯಿತು.

ಒಣತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣ ಹಾಗೂ ಕಸ ರವಾನಿಸಲು ವಾಹನ ಮತ್ತು ಕಸ ಸಂಗ್ರಹಿಸಲು ಕಟ್ಟಡದ ಕೊರತೆಯೂ ಎದುರಾಯ್ತು. ಆಗ ಪಂಚಾಯತ್ ವ್ಯಾಪ್ತಿಯ ಸಣ್ಣ ಅಂಗಡಿಯೊಂದರಲ್ಲಿ ಕಸವನ್ನು ಸಂಗ್ರಹಿಸುತ್ತಿದ್ದರು. ಇದರ ಪರಿಶೀಲನೆಗೆ ಜಿಲ್ಲಾ ಪಂಚಾಯತ್ ಅಧಿಕಾರಿಗಳು, ಹಾಗೂ ಜಿಲ್ಲಾ ಸಮಾಲೋಚಕರು ಭೇಟಿ ನೀಡುವಾಗ ಮುಂದಿನ ಸಲ ಪ್ರಗತಿ ಸಾಧಿಸುತ್ತೇವೆ ಎಂದು ಹೇಳಿ ಅದೇ ವರದಿಯನ್ನು ಪ್ರತಿ ತಿಂಗಳ ಸಭೆಯಲ್ಲಿ ನೀಡುವಾಗ ಪ್ರತಿ ಸಲವೂ ಮುಜುಗರಕ್ಕೆ ಒಳಗಾಗುತ್ತಿದ್ದರು. ಇದನ್ನು ಕುತ್ಯಾರು ಗ್ರಾಮ ಪಂಚಾಯತಿಯೂ ಸವಾಲಾಗಿ ತೆಗೆದುಕೊಂಡು 2021 ನೇ ಮಾರ್ಚ್ ತಿಂಗಳಲ್ಲಿ ತ್ಯಾಜ್ಯ ವಾಹನದ ಟೆಂಡರ್ ಅನುಮೋದನೆ ಸಿಕ್ಕಿತು. ಈ ಬೆನ್ನಲ್ಲೆ ಗ್ರಾಮದಲ್ಲಿ ಬಹುದೊಡ್ಡ ಬದಲಾವಣೆಯ ಭರವಸೆ ಮೂಡಿತು.

ಅಲ್ಲದೇ ವಾಹನ ಬಂದ ಬಳಿಕ ಮನೆಗಳಿಂದ ಒಣ ತ್ಯಾಜ್ಯ ಸಂಗ್ರಹಿಸಿದ್ದರು. ಈ ವೇಳೆ ಗ್ರಾಮಸ್ಥರಿಂದ ಸ್ವಚ್ಛತಾಗಾರರಿಗೆ ಸರಿಯಾದ ಬೆಂಬಲ ಸಿಗಲಿಲ್ಲ. ತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಿಸಲು ಸಾಧ್ಯ ಎಂಬ ಬಗ್ಗೆ ಮಾಹಿತಿಯೂ ಗ್ರಾಮಸ್ಥರಿಗೆ ಇರಲಿಲ್ಲ. ಕ್ರಮೇಣ ಗ್ರಾಮ ಪಂಚಾಯತ್ ನಲ್ಲಿ ನಡೆಯುವ ಗ್ರಾಮ ಸಭೆ, ಹಾಗೂ ಇನ್ನಿತ್ತರ ಸಭೆಗಳಲ್ಲಿ ತ್ಯಾಜ್ಯ ನಿರ್ವಹಣೆ ಹಾಗೂ ವಿಲೇವಾರಿಯ ಬಗ್ಗೆ ಮಾಹಿತಿ ನೀಡಿದರು. ಆನಂತರ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣದ ಬಳಿಕ ಗ್ರಾಮದ ಸಂಪೂರ್ಣ ಚಿತ್ರಣವೇ ಬದಲಾಯಿತು.

ಅನುಷ್ಟಾನ ಸಂದರ್ಭದಲ್ಲಿ ಎದುರಿಸಿದ ಸವಾಲುಗಳು: ಪ್ರಾರಂಭದಲ್ಲಿ ಗ್ರಾಮಸ್ಥರು ಘಟಕವನ್ನು ಆರಂಭಿಸಲು ವಿರೋಧಿಸುತ್ತಿದ್ದರು. ಮನೆ ಮನೆಗೆ ಸ್ವಚ್ಛ ವಾಹಿನಿ ವಾಹನ ಹೋದರು ಗ್ರಾಮಸ್ಥರು ತ್ಯಾಜ್ಯವನ್ನು ನೀಡುತ್ತಿರಲಿಲ್ಲ. ಇನ್ನೂ ಕೆಲವರು ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿ ನೀಡುತ್ತಿರಲಿಲ್ಲ.

## ಸಮಸ್ಯೆಗೆ ಕಂಡುಕೊಂಡ ಪರಿಹಾರಗಳು:

ಗ್ರಾಮದಲ್ಲಿ ಸಮರ್ಪಕವಾಗಿ ತ್ಯಾಜ್ಯ ನಿರ್ವಹಿಸಬೇಕೆಂಬ ಛಲದಿಂದ ಪಂಚಾಯತ್ ಸಿಬ್ಬಂದಿ ಮಹೇಶ್ ಎಂಬವರು ವಾಹನ ಚಾಲನೆ ಕಲಿತು ಮನೆ ಮನೆಗಳಿಂದ ಕಸ ಸಂಗ್ರಹಿಸುತ್ತಿದ್ದರು. ಈ ಸಂದರ್ಭದಲ್ಲಿ ಉಡುಪಿ ನಗರಸಭೆಯ ಎಸ್ ಎಲ್ ಆರ್ ಎಂ ವಾಹನ ಚಾಲಕರಾದ ಗ್ರಾಮದ ನಿವಾಸಿ ಶ್ರೀ ರಾಜು ಅವರು ವಾಹನ ಚಾಲಕನ ಹುದ್ದೆ ಖಾಲಿ ಇದೆ ಎಂದು ಗೊತ್ತಾಗಿ ಪಂಚಾಯತ್ ನಲ್ಲಿ ವಾಹನ ಚಾಲಕರಾಗಿ ಕೆಲಸಕ್ಕೆ ಸೇರಿಕೊಂಡದ್ದು ದೊಡ್ಡ ಸಮಸ್ಯೆಗೆ ಪರಿಹಾರ ದೊರಕಿತಲ್ಲದೆ, ಒಬ್ಬ ಅನುಭವಿ ಚಾಲಕನ ಸೇವೆ ಗ್ರಾಮ ಪಂಚಾಯತ್‌ಗೆ ಸಿಕ್ಕಂತಾಗಿತ್ತು. ಮುಂದಿನ ದಿನದಲ್ಲಿ ಗ್ರಾಮ ಪಂಚಾಯತ್‌ನ ಎಲ್ಲ ಸದಸ್ಯರು ಒಮ್ಮತದ ತೀರ್ಮಾನ ಕೈಗೊಂಡು, ಗ್ರಾಮಸ್ಥರ ಮನವೊಲಿಸಲು ಪಣತೊಟ್ಟರು.

ಯೋಜನೆಯ ಉದ್ದೇಶದ ಕುರಿತು ಜನರಿಗೆ ಪಂಚಾಯತ್ ಅಧ್ಯಕ್ಷರು, ಸದಸ್ಯರು , ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಾಗೂ ಸ್ವಚ್ಛತಾ ಕಾರ್ಯಕರ್ತರು ಪ್ರತಿ ದಿನ ಮನೆ ಮನೆಗೆ ಭೇಟಿ ನೀಡಿ, ತ್ಯಾಜ್ಯ ನಿರ್ವಹಣೆಯ ಉಪಯೋಗ, ದುಷ್ಪರಿಣಾಮಗಳ ಬಗ್ಗೆ ಜನರಿಗೆ ಅರಿವು ಮೂಡಿಸಿದರು. ತ್ಯಾಜ್ಯ ನಿರ್ವಹಣೆ ಕೇವಲ ಗ್ರಾಮ ಪಂಚಾಯತ್ ನ ಕೆಲಸವಲ್ಲ, ಗ್ರಾಮದ ಪ್ರತಿಯೊಬ್ಬರ ಕರ್ತವ್ಯ ಎಂದು ಅರಿತು ಗ್ರಾಮಸ್ಥರು ಸ್ವಚ್ಛತೆಗೆ ಗ್ರಾಮ ಪಂಚಾಯತಿ ಜೊತೆಗೆ ಕೈ ಜೋಡಿಸಿದ್ದಾರೆ.

ಇದೀಗ ಪ್ರತಿ ತಿಂಗಳು ಗ್ರಾಮದ ಎಲ್ಲಾ ಮನೆಗಳಿಂದ ತ್ಯಾಜ್ಯವನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ. ಪ್ರತಿ ತಿಂಗಳು ಸುಮಾರು **4000** ಕೆಜಿಯಷ್ಟು ತ್ಯಾಜ್ಯವನ್ನು ಮನೆಗಳಿಂದ ಹಾಗೂ ಅಂಗಡಿಗಳಿಂದ ಸಂಗ್ರಹಿಸುವುದರಿಂದ ಗ್ರಾಮ ಸ್ವಚ್ಛವಾಗಿದೆ. ಅಲ್ಲದೇ ಸ್ವಚ್ಛತಾ ಶ್ರಮದಾನದಿಂದ ಕುತ್ಯಾರು ಗ್ರಾಮ ಸುಸ್ಥಿರ ಅಭಿವೃದ್ಧಿಸಾಧಿಸಿದಲ್ಲದೇ, ತ್ಯಾಜ್ಯ ನಿರ್ವಹಣೆಯಲ್ಲಿ ಯಶಸ್ವಿಯಾಗಿದೆ.

8277506000
ಏಕೀಕೃತ ಸಹಾಯವಾಣಿ